
ಕರ್ನಾಟಕದಲ್ಲಿ ಯಾವುದೇ ಜಾತ್ರೆ, ಉತ್ಸವಗಳು ಒಂಬತ್ತು ದಿನ ನಡೆಯುವುದುಂಟು. ಆದರೆ ದಸರಾ ಉತ್ಸವ ಹತ್ತು ದಿನ ನಡೆಯುತ್ತದೆಂದು ಅದನ್ನು 'ದಶಹರ' ಎನ್ನಲಾಗಿದೆ. 'ದಶ' ಮತ್ತು 'ಅಹರ' ಪದಗಳು ಸೇರಿ ದಸರಾ ಪದ ಪ್ರಚಾರದಲ್ಲಿದೆ. ಮನುಷ್ಯ ತನ್ನನ್ನು ತಾನು ಎಷ್ಟೇ ಪರಾಕ್ರಮಿ ಎಂದು ಅವರಿವರ ಬಾಯಿಂದ ಹೊಗಳಿಸಿಕೊಂಡು ಬಂದಿದ್ದರೂ ಪ್ರಾಕೃತಿಕ ಶಕ್ತಿಗಳಿಗೆ ಹೆದರಿಕೊಂಡೇ ಬಂದಿದ್ದಾನೆ. ಆ ಪ್ರಾಕೃತಿಕ ಶಕ್ತಿ ಪುರುಷರೂಪಿಯೂ ಆಗಿರಬಹುದು. ಇದು ಒಮ್ಮೊಮ್ಮೆ ನಗಣ್ಯವೆನಿಸಿದಾಗ ಎಲ್ಲಾ ಪುರುಷಶಕ್ತಿಗಳು ಕೂಡಿ ತಂತಮ್ಮ ದೈಹಿಕ ಬಲ ಮತ್ತು ಆಯುಧಗಳನ್ನು ಸ್ತ್ರೀಶಕ್ತಿಗೆ ಹಸ್ತಾಂತರಿಸಿ ತಮ್ಮೆಲ್ಲ ದುಃಸ್ಥಿತಿ ಅಥವಾ ದುರ್ಗತಿಯನ್ನು ಪರಿಹರಿಸಬೇಕೆಂದು ಹೇಳಿಕೊಳ್ಳುವ ಮಾದರಿಯ ಕಥೆಗಳು ಕಾವ್ಯಮೂಲಗಳಲ್ಲಿ, ಪುರಾಣಗಳಲ್ಲಿ, ಐತಿಹ್ಯ ದಂತಕಥೆಗಳಲ್ಲಿ ಕಾಣಿಸಿರುತ್ತವೆ.

ಜಗತ್ತನ್ನು ಪೊರೆಯುವ ಶಕ್ತಿ ಸೃಷ್ಟಿಗೆ ಇದೆ. ಆ ಸೃಷ್ಟಿಯನ್ನು ಮಾತೃಸ್ವರೂಪದಲ್ಲಿ ಕಂಡುಕೊಂಡು ಬರುತ್ತ ರಾಮಾಯಣ, ಮಹಾಭಾರತಗಳಲ್ಲಿಯೂ ಆ ಮಾತೃದೇವತೆಯ ಪಾರಮ್ಯವನ್ನು ಕಾಣಬಹುದಾಗಿದೆ. ರಾವಣನನ್ನು ಕೊಲ್ಲುವ ಮುನ್ನ ರಾಮಚಂದ್ರನು ದುರ್ಗಾದೇವಿಯನ್ನು ಪೂಜಿಸಿ ಆಕೆಯ ನೆರವನ್ನು ಕೋರಿದನಂತೆ. ಮಹಾಭಾರತದಲ್ಲಿಯೂ ದುರ್ಗಾದೇವಿಯ ಪಠಣವಿದೆ. ಈ ಬಗೆಯ ಶಕ್ತಿದೇವತೆಯ ಸ್ತೋತ್ರಗಳು ರಾಮಾಯಣ, ಮಹಾಭಾರತಗಳಲ್ಲಿ ಕಾಲಾನಂತರದ ಸೇರ್ಪಡೆಯೇ ಆಗಿರಬೇಕು. ರಾಮಾಯಣಕ್ಕಿಂತ ಬಹುಮಟ್ಟಿಗೆ ಮಹಾಭಾರತಕ್ಕೆ ಅಸಂಖ್ಯಾತ ಉಪಕಥೆಗಳು, ಸ್ತೋತ್ರಗಳು, ನೀತಿ ಸಂಗತಿಗಳು ತದನಂತರ ಸೇರಿಕೊಂಡಂತೆ ದುರ್ಗಾ ಪ್ರಾರ್ಥನೆಯೂ ಸೇರಿಕೊಂಡಿರುತ್ತದೆ. ಆಯುಧ ಸಂಗತಿ, ಶಮಿ ಅಥವ ವಹ್ನಿ (ಬನ್ನಿ) ವೃಕ್ಷ ಈ ಸಂಬಂಧದ ಪ್ರಾರ್ಥನೆ ಮಹಾಭಾರತದ ವಿರಾಟಪರ್ವದ ಪೂರ್ವ ಭಾಗವಾಗಿ ಬರುತ್ತದೆ. ಯಾಕೆ ಅಲ್ಲಿ ಅದನ್ನು ಪ್ರಸ್ತಾಪಿಸಬೇಕೆಂದರೆ ಆ ಮುಂದಿನ ಶತಮಾನಗಳಲ್ಲಿ ಬೆಳೆದುಬಂದ ದಸರಾ ನವರಾತ್ರಿ ಉತ್ಸವಕ್ಕೂ, ಆಯುಧಗಳಿಗೂ, ಮನುಷ್ಯನ ಇತರೆ ಸಂಕಷ್ಟಹರಣಕ್ಕೂ ಒಳಿತಿಗೂ ದುರ್ಗೆಯ ಪ್ರಾರ್ಥನೆಗೂ ಸಂಬಂಧ ಬೆಳೆದುಬಂದುಬಿಟ್ಟಿದೆ. ಆರಂಭಕಾಲದಲ್ಲಿ ಇವು ಒಂದಕ್ಕೊಂದು ಸಂಬಂಧವಿಲ್ಲದಂತಿದ್ದರೂ ಕ್ರಮೇಣ ಅವೆಲ್ಲ ಹೊಂದಿಕೊಂಡು ಒಂದು ಆರಾಧನಾ ರೂಪ ತಳೆದಿದೆ.

ಮಹಾಭಾರತದಲ್ಲಿ ಪಾಂಡವಾದಿಗಳು ವಿರಾಟ ನಗರಕ್ಕೆ ಪ್ರವೇಶಿಸುವ ಮುನ್ನ ಧರ್ಮರಾಯನು ಅರ್ಜುನನಿಗೆ ಈ ಮಾತನ್ನು ಹೇಳುತ್ತಾನೆ. 'ನಾವು ಈ ನಗರವನ್ನು ಪ್ರವೇಶಿಸುವ ಮೊದಲು ನಮ್ಮ ಈ ದಿವ್ಯಾಯುಧಗಳನ್ನು ಒಂದೆಡೆಯಲ್ಲಿ ಜೋಪಾನವಾಗಿ ಇಡಬೇಕಾಗಿದೆ. ಯಾವ ಸ್ಥಳದಲ್ಲಿಡುವುದು ಸೂಕ್ತ? ಒಂದು ವೇಳೆ ಆಯುಧ ಸಮೇತರಾಗಿಯೇ ವಿರಾಟ ಪಟ್ಟಣವನ್ನು ಪ್ರವೇಶಿಸಿದರೆ ನಮ್ಮ ದರ್ಶನ ಮಾತ್ರದಿಂದಲೇ ಪುರಜನರು ಉದ್ವಿಗ್ನರಾಗುತ್ತಾರೆ. ನಿನ್ನ ಗಾಂಡೀವವು ಅತ್ಯದ್ಭುತವಾದ ಮಹಾಧನುಸ್ಸಾಗಿರುವುದು' ಎಂದು ಹೇಳುತ್ತಾ ಅಲ್ಲಿಯೇ ದೂರದಲ್ಲಿ ಕಂಡ ಒಂದು ಶಮಿ ವೃಕ್ಷದಲ್ಲಿ ಆಯುಧಗಳನ್ನು ಬಚ್ಚಿಡುವುದೆಂದು ಪರಸ್ಪರ ಮಾತನಾಡಿಕೊಳ್ಳುತ್ತಾರೆ. ಹಾಗೆ ಅರ್ಜುನನು ಗಾಂಡೀವವನ್ನು ಬನ್ನಿ ವೃಕ್ಷದಲ್ಲಿ ಅಡಗಿಸಿಡುವಾಗ, 'ಯಾವ ದಿವ್ಯವಾದ ಧನುಸ್ಸಿನಿಂದ ಅರ್ಜುನನು ಏಕಾಂಗಿಯಾಗಿ ರಥದಲ್ಲಿ ಕುಳಿತ ಮನುಷ್ಯರನ್ನು, ದೇವತೆಗಳನ್ನು ಜಯಿಸಿದನೋ ಮತ್ತು ಅನೇಕ ದೇಶಗಳನ್ನು ಧರ್ಮರಾಜನ ಸಲುವಾಗಿ ಗೆದ್ದುಕೊಟ್ಟನೋ ಅಂತಹ ದಿವ್ಯವಾದ ಗಾಂಡೀವ ಧನುಸ್ಸಿನ ಗುರಿಯನ್ನು ಅರ್ಜುನನು ಸಡಿಲಿಸಿದನು' ಎಂದಿದೆ. ಆ ಮುಂದೆ ಧರ್ಮರಾಯನು ದುರ್ಗಾದೇವಿಯನ್ನು ಸ್ತೋತ್ರ ಮಾಡಿದನಂತೆ. ಆ ಪ್ರಾರ್ಥನೆಯಲ್ಲಿ ಭಾಗವತದ ಕಥೆಯ ಮೂಲಪುರುಷನಾದ ಕೃಷ್ಣನ ಸ್ತುತಿಯು, ಅಲ್ಲಿಯೇ ದುರ್ಗಿಯ ಸ್ತೋತ್ರವು 'ತ್ರೈಲೋಕ್ಯ ರಕ್ಷಣಾರ್ಥಾಯ ಮಹಿಷಾಸುರ ನಾಶಿನಿ' ಎಂದು ಕಾಣಿಸಿಕೊಳ್ಳುತ್ತದೆ. ಇಲ್ಲಿ 'ಮಹಿಷಾಸುರ ನಾಶಿನಿ' ಎಂಬ ಪದ ಇರುವುದನ್ನು ಗಮನಿಸಬೇಕು. ಮಹಾಭಾರತದಲ್ಲಿ ಈ ಶಕ್ತಿ ಸ್ವರೂಪಿಣಿಯ ಸರ್ವರೀತಿ ಅಲಂಕಾರ ಸಂಬಂಧೀ ಪ್ರಾರ್ಥನೆ ದೀರ್ಘವಾಗಿಯೇ ಇದೆ:

'ಮೂರು ಲೋಕಗಳ ರಕ್ಷಣೆಗಾಗಿ ಮಹಿಷಾಸುರನನ್ನು ಧ್ವಂಸ ಮಾಡಿದ ಚಾಮುಂಡೇಶ್ವರಿಯು ನೀನೇ. ನನ್ನ ವಿಷಯದಲ್ಲಿ ಪ್ರಸನ್ನಳಾಗು ತಾಯೇ ದಯೆ ತೋರು, ವಿಜಯವನ್ನು ದಯಪಾಲಿಸು, ಮಹಾಕಾಳಿ ನೀನು ಖಡ್ಗಖಟ್ವಾಂಗಗಳನ್ನು ಧರಿಸಿರುವೆ. ದಾರಿದ್ರ್ಯದ ಭಾರವನ್ನು ತಪ್ಪಿಸಿಕೊಳ್ಳಲು ನಿನ್ನನ್ನು ಯಾರು ಪ್ರತಿಕ್ಷಣದಲ್ಲಿಯೂ ಸ್ಮರಿಸಿಕೊಳ್ಳುತ್ತಾರೆಯೋ ಮತ್ತು ಅನುದಿನವೂ ಪ್ರಾತಃಕಾಲದಲ್ಲಿ ಯಾರು ನಿನ್ನನ್ನು ನಮಸ್ಕರಿಸುತ್ತಾರೆಯೋ ಅವರಿಗೆ ದುರ್ಲಭವಾದುದೇ ಇರುವುದಿಲ್ಲ. ದುರ್ಗಾದೇವಿ, ಅತಿದುಸ್ಸಹವಾದ ದುಃಖದಿಂದ ನಿನ್ನ ಭಕ್ತರನ್ನು ಪಾರುಮಾಡುವ ಸಾಮರ್ಥ್ಯವನ್ನು



ದಸರೆಗೆ ಬಂದಿರುವ ಆನೆಯ ತಾಲೀಮು

**ಆಯುಧಗಳೊಂದಿಗೆ ನಂಟು ಹೊಂದಿರುವ ನವರಾತ್ರಿಯ ಕೇಂದ್ರದಲ್ಲಿರುವುದು ಶಕ್ತಿದೇವತೆ. ಮನುಷ್ಯನ ಒಳಿತಿಗಾಗಿ ಮಾತೆಯನ್ನು ಪ್ರಾರ್ಥಿಸುವ–ಆರಾಧಿಸುವ ಸಂದರ್ಭವೇ ದಸರೆ.**